**O.S. 115-15 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 07.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ S R A ವಕೀಲರಿಂದಃ**

22. ನನ್ನ ತಮ್ಮ ಹಾಗೂ ತಂಗಿಯರು ಅಪ್ರಾಪ್ತ ವಯಸ್ಕರು ಇರುತ್ತಾರೆಂದು ತೋರಿಸಲು ನಾನು ನಿಪಿ.30 ರಿಂದ 32 ರ ದಾಖಲೆಗಳನ್ನು ಹಾಜರಪಡಿಸಿದ್ದೇನೆ. ನನ್ನ ತಂದೆ ಹಾಗೂ ದೊಡ್ಡಪ್ಪ ರವರು ಬರೆದುಕೊಟ್ಟ ಖರೀದಿ ಪತ್ರಕ್ಕೆ ನಿಪಿ.9 ಖರೀದಿ ಪತ್ರಕ್ಕೆ ಈರಮ್ಮ ಸಹಿ ಮಾಡಿದ್ದಾಳೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಮೋಸ ಮಾಡಿ ಮಾಡಿಕೊಂಡಿದ್ದಾರೆಂದು ಉತ್ತರಿಸುತ್ತಾಳೆ. ಈರಮ್ಮಳ ಜನ್ಮ ದಾಖಲೆ ನಮ್ಮ ಬಳಿ ಇಲ್ಲ. ನಾನು ಅದನ್ನು ತೆಗೆಸಿಕೊಡುತ್ತೇನೆ. ಶಾಲಾ ದಾಖಲೆ ಹಾಗೂ ಜನ್ಮ ದಾಖಲೆಯಲ್ಲಿ ಜನ್ಮ ದಿನಾಂಕ ಹೆಚ್ಚು - ಕಡಿಮೆ ಇರುತ್ತವೆ ಅಂದರೆ, ಶಾಲೆ ದಾಖಲೆಯಲ್ಲಿ ಹೆಚ್ಚು - ಕಡಿಮೆ ಇರುತ್ತದೆ ಮತ್ತು ಜನ್ಮ ದಾಖಲೆಯಲ್ಲಿ ಸರಿ ಇರುತ್ತದೆ. ವಿರಭದ್ರಗೌಡ ಮಲ್ಲನಗೌಡ ಪಾಟೀಲ ರವರು ವಾದಿ ಇರುತ್ತಾರೆ ಅಂದರೆ ಸರಿ. ರುದ್ರಗೌಡ ಮಲ್ಲನಗೌಡ ಪಾಟೀಲ ರವರು ಖರೀದಿ ಪತ್ರಕ್ಕೆ ಸಹಿ ಮಾಡಿದ್ದಾರೆ ಅಂದರೆ ಸರಿಯಲ್ಲ. ನಿಪಿ.9 ರಲ್ಲಿ ರುದ್ರಗೌಡ ಮಲ್ಲನಗೌಡ ಪಾಟೀಲ ರವರ ಹೆಸರು ಹಾಗೂ ಸಹಿ ಇದೆ ಅಂದರೆ ಸರಿಯಲ್ಲ. ನಿಡಿ.7 ಹಾಗೂ 8 ಗಳಲ್ಲಿ ರುದ್ರಗೌಡ ಮಲ್ಲನಗೌಡ ಪಾಟೀಲ ರವರ ಹೆಸರು ಹಾಗೂ ಸಹಿ ಇದೆ ಅಂದರೆ ಸರಿಯಲ್ಲ. ನಿಡಿ.7 ಹಾಗೂ 8 ಗಳಿಗೆ ರುದ್ರಗೌಡ ಮಲ್ಲನಗೌಡ ಪಾಟೀಲ ರವರು ಸಹಿ ಮಾಡಿದರೂ ಸಹ ಮಾಡಿಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ.9 ಕ್ಕೆ ಈರಮ್ಮ ಸಹಿ ಮಾಡಿದರೂ ಸಹ ಇಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ, ಮೋಸ ಮಾಡಿ ಸಹಿ ಮಾಡಿಕೊಂಡಿದ್ದಾರೆಂದು ಹೇಳುತ್ತಿದ್ದೇನೆ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.